# ಬಲ್ ಜಾಣೆ... ಬುಲ್‌ಬುಲ್!

■ ಚಿತ್ರ-ಲೇಖನ:
ಗ. ಮ. ತುಂಬೇಮನೆ





ಕಿಟಕಿ ಬಳಿ ಪೇಪರ್ ಓದುತ್ತಿದ್ದಾಗ ಹತ್ತಿರದಲ್ಲೇ ಹಕ್ಕಿಗಳ ಸಂಭಾಷಣೆ ಓದಿಗೆ ಬ್ರೇಕ್ ನೀಡಿತು. ಕುತೂಹಲದಿಂದ ಕಿಟಕಿ ಮೂಲಕವೇ ನೋಡಿದಾಗ, ಪಕ್ಕದ ನೆಲ ಮಟ್ಟದ ತುಳಸಿ ಗಿಡದ ಮೇಲೆ ಎರಡು ಬುಲ್ ಬುಲ್ ಹಕ್ಕಿಗಳು ಕುಳಿತು ಭಾರೀ ಸಂಭಾಷಣೆಯಲ್ಲಿ ತೊಡಗಿವೆ! ಮೂರಡಿ ಎತ್ತರದ ತುಳಸಿ ಗಿಡದ ಮೇಲೆ ಎಲ್ಲರಿಗೂ ಕಾಣುವಂತೆ ಬಟ್ಟಲಾಕಾರದಲ್ಲಿ ಆಗಲೇ ಅರ್ಧ ಗೂಡು ನಿರ್ಮಿಸಿಯೂ ಆಗಿದೆ! ಆಗಿನ ಜೋರು ಸಂಭಾಷಣೆ 'ಬೆಡ್‌ರೂಮ್ ತಯಾರಿ ಹೇಗಿರಬೇಕು' ಎಂಬುದರ ಕುರಿತದ್ದು ಎಂದು ನನಗೆ ತಡವಾಗಿ ಅರ್ಥವಾಯ್ತು!

ಹಕ್ಕಿ ಗೂಡು ಕಂಡ ತಕ್ಷಣ ತಡ ಮಾಡದೆ ಕ್ಯಾಮೆರಾ ತಂದು ಫೋಕಸ್ ಮಾಡಿಯೇ ಬಿಟ್ಟೆ. ಅಷ್ಟೇ! ನನಗಿಂತ ಮೊದಲೇ ಬುಲ್‌ಬುಲ್ ದಂಪತಿ ನನ್ನ ಕ್ಯಾಮೆರಾ ಲೆನ್ಸ್‌ನ ಹೊಳಪು ಗುರುತಿಸಿ ಅಲ್ಲಿಂದ ಹಾರಿ ಹೋದವು! 'ಸದ್ಯಕ್ಕೆ ಇವುಗಳ ಸಹವಾಸ ಬೇಡ, ಮೊಟ್ಟೆ ಇಡುವವರೆಗೆ ಕಾಯೋಣ'ವೆಂದು ನಿರ್ಧರಿಸಿದೆ. ಅಲ್ಲಿವರೆಗೆ ಬುಲ್‌ಬುಲ್ ಹಕ್ಕಿಗಳ ಗುಣ ಧರ್ಮಗಳ ಮಾಹಿತಿಗಳನ್ನು ಓದತೊಡಗಿದೆ.

ಕೆಮ್ಮೀಸೆ ಪಿಕಳಾರ (ರೆಡ್ ವಿಸ್ಕರ್ಡ್ ಬುಲ್‌ಬುಲ್) ಎಂದು ಕರೆಯುವ ಈ ಹಕ್ಕಿಗಳು ಗುಬ್ಬಿಯ ಗಾತ್ರದವು. ತಲೆಯ ಮೇಲೆ ಕಪ್ಪು ಜುಟ್ಟು ಹೊಂದಿದ್ದು, ರೆಕ್ಕೆ ಮತ್ತು ಬೆನ್ನು ಕಂದು ಬಣ್ಣದಲ್ಲಿದ್ದರೆ, ಎದೆ ಹಾಗೂ ಕುತ್ತಿಗೆ ಬಿಳಿ ಬಣ್ಣದ್ದು. ಕಣ್ಣಿನ ಕೆಳಗೆ ಕೆಂಪು ಬಣ್ಣವಿದ್ದು ಗಂಡು ಹೆಣ್ಣುಗಳಲ್ಲಿ ಅಂತಹ ವ್ಯತ್ಯಾಸಗಳು ಇರುವುದಿಲ್ಲ. ಜೊತೆಯಾಗಿ ಹಾಗೂ ಚದುರಿದ ಗುಂಪುಗಳಲ್ಲಿ ಕಾಡಿನಲ್ಲಿ ಅಥವಾ ಉದ್ಯಾನಗಳಲ್ಲಿ ವಾಸಿಸುತ್ತವೆ. ಭಾರತ, ಮ್ಯಾನ್ಮಾರ್,

(8ನೇ ಪುಟ ನೋಡಿ)